ಆ ಸಂಚಾರಿ ಚೌಕದ ಜೀಬ್ರಾ ಪಟ್ಟಿಗಳ ಬಳಿ ದಿನಪತ್ರಿಕೆಗಳನ್ನು ಮಾರುತ್ತಿದ್ದ ಹುಡುಗನೊಂದಿಗೆ ನಾನ್ಯಾವಾಗಲೂ ಸುಖಾ ಸುಮ್ಮನೆ ತಮಾಷೆ ಮಾಡುತ್ತಿದ್ದೆ. ಸೈಕಲ್ ಏರಿ ಆ ಕಡೆ ಹಾದು ಹೋಗುವಾಗಲೆಲ್ಲಾ ಆತ ಆಂಗ್ಲ ದಿನಪತ್ರಿಕೆಗಳನ್ನು ಎದೆಗೆ ಅವುಚಿ ಹಿಡಿದು ನನ್ನ ಹಿಂದೆಯೆ ಓಡಿ ಬರುತ್ತಿದ್ದ. ಸ್ವಲ್ಪ ಹಿಂದಿ, ಕೊಂಚ ಆಂಗ್ಲಭಾಷೆಯಲ್ಲಿ ಸಂಜೆ ಪತ್ರಿಕೆಗಳ ಬಿಸಿ ಬಿಸಿ ಸುದ್ದಿಗಳ ಶೀರ್ಷಿಕೆಗಳನ್ನು ಜೋರು ಜೋರಾಗಿ ದೊಡ್ಡ ಸ್ವರದಲ್ಲಿ ಕೂಗಿ ಹೇಳುತ್ತಿದ್ದ.

ಈ ಬಾರಿ ನಾನು ಕಾಲು ಹಾದಿಯ ಮೇಲೆ ನಿಂತು ಅವನಿಂದ ಹಿಂದಿ ದಿನಪತ್ರಿಕೆಯನ್ನು ಪಡೆದೆ. ಅವ ತೆರೆದ ಬಾಯಿ ತೆರೆದಂತೇ ನೋಡಿ, 'ನಿಮಗೆ ಹಿಂದಿ ಗೊತ್ತಿದೆಯಾ?' ಎಂದು ವಿಚಾರಿಸಿಕೊಂಡ.

'ಹೌದು, ಏಕೆ? ನೀನೇನಂತ ತಿಳಿದಿದ್ದೆ?' ಪತ್ರಿಕೆಯ ಹಣವನ್ನು ಅವನಿಗೆ ಕೊಡುತ್ತಾ ಕೇಳಿದೆ.

ಕ್ಷಣ ಹೊತ್ತು ಬಿಟ್ಟು ಹೇಳಿದ: 'ಆದ್ರೆ!...' ನೀವು ಇಂಗ್ಲೀಷಿನವರ ಹಾಗೆ ಕಾಣ್ತೀರಿ... ಆದಾಗ್ಯೂ ನೀವು ಹಿಂದಿಯನ್ನು ಓದಬಲ್ಲಿರಾ?...'

'ಹಾಂ! ಖಂಡಿತಾ ಓದಬಲ್ಲೆ. ಹಿಂದಿಯಲ್ಲಿ ನನಗೆ ಓದಲು, ಬರೆಯಲು, ಮಾತನಾಡಲೂ ಬರುತ್ತದೆ. ಶಾಲೆಯಲ್ಲಿ ಹಿಂದಿಯನ್ನ ಒಂದು 'ಸಬ್ಜೆಕ್ಟ್' ರೂಪದಲ್ಲಿ ಓದಿದ್ದೆ' ನಾನು ಅಸಹನೆಯಿಂದ ಹೇಳಿದೆ.

'ಸಬ್ಜೆಕ್ಟ್' ಅಂದರೆ ಏನು?' ಆತ ಅಮಾಯಕನಂತೆ ಕೇಳಿದ.

ಎಂದೂ ಶಾಲೆಯ ಮೆಟ್ಟಿಲನ್ನೇ ಹತ್ತಿಲ್ಲದವನಿಗೆ ಈ 'ಸಬ್ಜೆಕ್ಟ್' ಬಗ್ಗೆ ತಿಳಿ ಹೇಳಲು ಕಷ್ಟವೆನಿಸಿದರೂ ವಿವರಿಸಲು ಪ್ರಯತ್ನಪಟ್ಟೆ. 'ಈ ಸಬ್ಜೆಕ್ಟ್ ಅಂದ್ರೇ...'

ಅಷ್ಟರಲ್ಲಿ ಸಿಗ್ನಲ್‌ನ ಕೆಂಪುದೀಪ ಬದಲಾಗಿ ಹಸಿರು ಬಣ್ಣವಾಗಿತ್ತು. ನನ್ನ ಹಿಂದೆ ಇದ್ದ ಇತರ ವಾಹನಗಳ ಹಾರ್ನ್ ಜೋರಾಯಿತು. ಅವುಗಳೊಂದಿಗೆ ನಾನೂ ಮುಂದೆ ಚಲಿಸಿದೆ.

ಮಾರನೇ ದಿನ ಅದೇ ಸ್ಥಳದಲ್ಲಿದ್ದ ಆತ, ದಿನಪತ್ರಿಕೆಯನ್ನು ನನ್ನೆಡೆಗೆ ಚಾಚಿ ಕೇಳಿದ, 'ತಗೊಳ್ಳಿ ನಿಮ್ಮ ಪೇಪರ್, ಈಗ ಹೇಳಿ ಸಬ್ಜೆಕ್ಟ್ ಅಂದ್ರೆ ಏನು?' ಇಂಗ್ಲೀಷಿನಲ್ಲಿ ಹೇಳಲು ಪ್ರಯತ್ನಿಸಿದ ಆತನ ಬಾಯಲ್ಲಿ ಈ ಪದ ವಿಚಿತ್ರವಾಗಿ ಧ್ವನಿಸಿತು.

'ಶಾಲೆಯಲ್ಲಿ ವಿದ್ಯಾರ್ಥಿಗಳು ಓದಲು ಇರಿಸಿರುವ ವಿಷಯಗಳಿಗೆ ಸಬ್ಜೆಕ್ಟ್ ಅಂತಾರೆ, ನೀನೆಂದೂ ಶಾಲೆಗೇ ಹೋಗಿಲ್ವಾ?' ಕೇಳಿದೆ. ಕೆಂಪು ದೀಪ ಇನ್ನೂ ಚಾಲ್ತಿಯಲ್ಲಿತ್ತು.

'ಯಾವತ್ತೂ ಇಲ್ಲ...' ತನ್ನ ಸೈಕಲ್‌ನ ಸೀಟಿನ ಮಟ್ಟದವರೆಗೆ ಕೈ ತೋರಿಸುತ್ತಾ ಹೇಳಿದ, 'ಇಷ್ಟುದ್ದ ಇದ್ದಾಗಿನಿಂದಲೂ ದುಡಿಯುತ್ತಿದ್ದೇನೆ. ಈ ಮೊದಲು ನನ್ನೊಂದಿಗೆ ನನ್ನಮ್ಮ ಬರುತ್ತಿದ್ದಳು, ಈಗ ನಾನೊಬ್ಬನೇ ಈ ಕೆಲಸ ಮಾಡ್ತಿದ್ದೇನೆ.'

ನಿನ್ನ ಅಮ್ಮ ಈಗೆಲ್ಲಿದ್ದಾರೆ?...' ಹಾಗೆ ಕೇಳುತ್ತಿದ್ದಾಗಲೇ ದೀಪದ ಬಣ್ಣ ಬದಲಾಯಿಸಿತು. ಮುಂದೆ ಮುಂದೆ ಹೋಗ್ತಿದ್ದಂತೆ, ಹಿಂದಿನಿಂದ ಜೋರು ಧ್ವನಿ ಕೇಳಿಸಿತು.

'ಆಕೆ ಮೀರತ್‌ನಲ್ಲಿದ್ದಾಳೆ... ನನ್ನ...' ಉಳಿದ ಶಬ್ದಗಳು ಗದ್ದಲದಲ್ಲಿ ಮುಳುಗಿದವು.

ಮಾರನೇ ದಿನ ಸಿಕ್ಕಾಗ ಸ್ವಲ್ಪ ನಾಚಿಕೆಯಿಂದಲೇ ಕೇಳಿದ: 'ನನ್ನ ಹೆಸರು ಸಮೀರ್... ನಿಮ್ಮ ಹೆಸರೇನು?'

'ಓಹ್, ಅಸಾಧ್ಯ...' ನನ್ನ ಸೈಕಲ್ ಅಲುಗಾಡಿತು. 'ನನ್ನ ಹೆಸರೂ ಕೂಡ ಸಮೀರ್...'

'ಏನು?' ಅವನ ಕಣ್ಣುಗಳಲ್ಲಿ ವಿಚಿತ್ರ ಹೊಳಪು ಕಾಣಿಸಿತು.

'ಹೌದು. ಇದು ಹನುಮಂತನ ಇನ್ನೊಂದು ಹೆಸರು, ಗೊತ್ತಾ ನಿಂಗೆ.' ನಾನು ಮುಗುಳ್ನಕ್ಕೆ.

